ಆ) ಟ್ರಾನ್ಸ್‌ಪೋರ್ಟ್ ಸಬ್ಸಿಡಿಯನ್ನು ಕಬ್ಬು ಸರಬರಾಜು ಮಾಡಿದ ರೈತರಿಗೆ ನೀಡುವ ಬಗ್ಗೆ.

+ ಶ್ರೀ ಎಸ್.ಪಿ.ಮುದ್ದುಹನುಮೇಗೌಡ (ಕುಣಿಗಲ್): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕಳೆದ ವರ್ಷ ಕಬ್ಬನ್ನು ಹೊರಗಡೆ ಸರ್‌ಪ್ಲಸ್ ಏರಿಯಾದಿಂದ ಸಕ್ಕರೆ ಕಾರ್ಖಾನೆಗೆ ರೈತರು ಸರಬರಾಜು ಮಾಡಿದರು. ಉದಾಹರಣೆಗೆ, ಕುಣಿಗಲ್ ತಾಲ್ಲೂಕಿನಿಂದ ಹಿರಿಯೂರು ಕಾರ್ಖಾನೆಗೆ, ಗೌರಿಬಿದನೂರು ಕಾರ್ಖಾನೆಗೆ ಸರಬರಾಜು ಮಾಡಿದರು. ಅಲ್ಲಿ ಅವರಿಗೆ ಕಬ್ಬು ಇರಲಿಲ್ಲ. ಆದುದರಿಂದ ಅವರೇ ಫಾಲಂಟರಿಯಾಗಿ ಬಂದು ನಮಗೆ ಕಬ್ಬು ಸರಬರಾಜು ಮಾಡಿ, ನಾವು ಟ್ರಾನ್ಸ್‌ಪೋರ್ಟ್ ಸಬ್ಸಿಡಿ ಕೊಡುತ್ತೇವೆಂದು ರೈತರಿಗೆ ಆಶ್ವಾಸನೆ ಕೊಟ್ಟಿದ್ದರು. ಅದರ ಪ್ರಕಾರ ನಮ್ಮ ತಾಲ್ಲೂಕು ಮತ್ತು ಚನ್ನರಾಯಪಟ್ಟಣ ತಾಲ್ಲೂಕು ಹೀಗೆ ಎಲ್ಲಾ ಕಡೆ ಕೂಡ ಕಾರ್ಖಾನೆಗೆ ಕಬ್ಬನ್ನು ಸರಬರಾಜು ಮಾಡಿದರು. ಈಗ ಏನಾಗಿದೆ ಎಂದರೆ ಅವರಿಗೆ ಟ್ರಾನ್ಸ್‌ಪೋರ್ಟ್ ಸಬ್ಸಿಡಿ ಕೊಡುತ್ತಿಲ್ಲ. ಒಂದು-ಒಂದೂವರೆ ವರ್ಷವಾದರೂ ಟ್ರಾನ್ಸ್‌ಪೋರ್ಟ್ ಸಬ್ಸಿಡಿ ಕೊಡುತ್ತಿಲ್ಲ. ಕಿಲೋಮೀಟರ್‌ಗೆ 50 ಪೈಸೆ ಒಂದು ಟನ್ನಿಗೆ ಎಂದು ಏನು ಆಶ್ವಾಸನೆ ಕೊಟ್ಟಿದ್ದರು ಅದನ್ನು ಕೊಡುತ್ತಿಲ್ಲ. ದಯಮಾಡಿ ಮಾನ್ಯ ಸಕ್ಕರೆ ಸಚಿವರು ಟ್ರಾನ್ಸ್‌ಪೋರ್ಟ್ ಸಬ್ಸಿಡಿಯನ್ನು ಕಬ್ಬು ಸರಬರಾಜು ಮಾಡಿದ ರೈತರಿಗೆ ಕೊಡಿಸುವ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಸಭಾಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಉಮೇಶ್ ವಿ.ಕತ್ತಿ (ಸಕ್ಕರೆ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ್ದು ನಿಜ ಇದೆ. 1995-96ನೇ ಸಾಲಿನಲ್ಲಿ ಎಕ್ಸ್‌ಸ್ ಕಬ್ಬು ಆದಕಾರಣ ತಮಗೆ ಬೇಕಾದ ಕಾರ್ಖಾನೆಗಳಿಗೆ ಕೊಡಬಹುದೆಂದು ಸರ್ಕಾರ ಆದೇಶ ಹೊರಡಿಸಿ ಪ್ರತಿ ಕಿಲೋಮೀಟರ್‌ಗೆ 50 ಪೈಸೆ ಯಂತೆ ಪ್ರತಿ ಟನ್ನಿಗೆ ಕೊಡಲು ಸರ್ಕಾರ ಆದೇಶ ಹೊರಡಿಸಿತ್ತು. ಈ ಮಾಹಿತಿ ಪ್ರಕಾರ ಮೂರುವರೆ ಕೋಟಿ ರೂಪಾಯಿಗಳನ್ನು ರಾಜ್ಯದಲ್ಲಿರತಕ್ಕ ಎಲ್ಲಾ ಸಕ್ಕರೆ ಕಾರ್ಖಾನೆಗಳಿಗೆ ಸಬ್ಸಿಡಿ ಕೊಡಬೇಕಾಗಿದೆ. ಆದರೆ ನಮಗೆ ಮಾಹಿತಿ ಲಭ್ಯವಾದ ಪ್ರಕಾರ ಈಗಾಗಲೇ ಒಂದು ಕೋಟಿ 25 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಈಗ ಇನ್ನೊಂದು ಮಾಹಿತಿ ಬಂದಿದೆ, ಸದನ ಮುಗಿದ ತಕ್ಷಣ ಉಳಿದ ಹಣ 2 ಕೋಟಿ 25 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುವಂಥ ವ್ಯವಸ್ಥೆ ಮಾಡುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

(ಇ) ಹೊಸ ದುರ್ಗದ ವೇದಾವತಿ ನದಿಯಿಂದ ಮರಳು ಸಾಗಿಸುತ್ತಿರುವ ಬಗ್ಗೆ

ಶ್ರೀ ಟಿ.ಹೆಚ್.ಬಸವರಾಜ್ (ಹೊಸದುರ್ಗ): ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದ ಹೊಸದುರ್ಗಕ್ಕೆ 5 ಕಿಲೋಮೀಟರ್ ದೂರದಲ್ಲಿ ವೇದಾವತಿ ನದಿ ಹರಿಯುತ್ತದೆ. ಹೊಸದುರ್ಗಕ್ಕೆ ನೀರನ್ನು ಕೊಡುವ ಸೌಲಭ್ಯ ಮಹಾರಾಜರ ಕಾಲದಲ್ಲಿ ಆಗಿರತಕ್ಕದ್ದು. ಅದಕ್ಕೆ ಮೀನಾಕ್ಷಿ ದೇವಿಯವರ ನೀರು ಸರಬರಾಜು ಯೋಜನೆ ಎಂದು ಹೆಸರು. ಈಗ 2-3 ತಿಂಗಳುಗಳಿಂದ ಸದರಿ ನದಿಯಲ್ಲಿ ನೀರು ಒಣಗಿರುವುದು ನೋಡಿದ್ದೇವೆ.